
# ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)

# H.S.R. BADAVANE BRAHMANA SANGHA (R)

(SOR/BLU/DR/816/2009-10/31-10-2009)

# 56, 4th Floor, "Gayathri Bhavan", 31st Main, 18th Cross, Sector-II, HSR LAYOUT, BANGALORE-560102

www.hsrvipra.co.in ♦ email: hsr.brahmana@yahoo.com






॥ ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಮ್ । ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ॥

# ವಿಪ್ರಬಂಧು


ತ್ರೈಮಾಸಿಕ ಪತ್ರಿಕೆ - ಸಂಚಿಕೆ 15 - ಪುಟಗಳು 16

ಕ್ರೋಧಿನಾಮ ಸಂವತ್ಸರ | ವಸಂತ ಋತು | ಏಪ್ರಿಲ್ 2024





ಯುಗಾದಿ, ಶ್ರೀರಾಮನವಮಿ ಹಾಗೂ ನೃಸಿಂಹ ಜಯಂತಿ ಹಬ್ಬದ ಹಾರ್ದಿಕ ಶುಭಾಶಯಗಳು

BOOK-POST



With Best Compliments from:
SHASTRY'S BAKERY AND SWEETS
ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು
# 714/2, 7th Block, K.R. Road, Jayanagar, Bangalore - 560 070
ಸಂತಸದ ಸುದ್ಧಿ ನೂತನವಾಗಿ ಬನಶಂಕರಿ ಶಾಖೆ ತೆರೆಯಲಾಗಿದೆ
70, 46ನೇ ಅಡ್ಡರಸ್ತೆ, ಬನಶಂಕರಿ ಬಸ್ ನಿಲ್ದಾಣದ ಹತ್ತಿರ ಬನಶಂಕರಿ, ಬೆಂಗಳೂರು
ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.
ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು
ದೂರವಾಣಿ : 2676 4599
94486 85061, 94803 91152
99869 28281




With Best Compliments From
DOCTOR
SERVING the humanity since 29 years......
RAKSHIT HEALTH AND COUNSELLING CENTER
" Certified Diabetes Counsellors "
1. #7, (76/1), 7th Cross, 27th Main, 1st Sector, HSR Layout, BANGALORE-560 102
2. #30/1, Munireddy Complex, Mangammanapalya Main Road, Yellukunte, HSR III rd Sector, BANGALORE-560 068.
Dr. B.S. LAKSHMI
BAMS (Ay), BAMS (Integrated)
CNCC (Childcare and Nutrition)
Mobile: 98455 18758
Winner of GLOBAL HEALTH CARE EXCELLENCE AWARD 2013
Dr. AMARNATH T.S.
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809

## EXECUTIVE COMMITTEE MEMBERS

| | |
|---|---|
| ***PRESIDENT*** | |
| Anantha Ramu S. | 9448055193 |
| ***VICE-PRESIDENTS*** | |
| Subbaramaiah C.N. | 9448189695 |
| Sridhar Rao H. | 9632211611 |
| ***SECRETARY*** | |
| Ramesh A. | 9008458078 |
| ***TREASURER*** | |
| Ashwathanarayana Rao K.N. | 9449032129 |
| ***JOINT SECRETARIES*** | |
| Anantha M.S. | 9986825761 |
| Narasimha Murthy A.R. | 9844568839 |
| Raghunandan C. | 9167661386 |
| Natesh G.S. | 9448777770 |
| ***EC MEMBERS*** | |
| Narasimhaiah V | 9449028618 |
| Dr. Shyam Sundar G. | 9448676442 |
| Gururaja Rao S. | 9343529635 |
| Ramesh R. | 9880170113 |
| Lakshmana B.G. | 9901311225 |
| Smt. Lakshmi Adiga | 8884122494 |
| Manoja Karantha K. | 8880443064 |
| Narendra Bhat H.G. | 9845173821 |
| Srinivasa S.V. | 7090709946 |
| Subramanya S.N. | 9945034420 |
| Ajeya Krishna K.R. | 9980010021 |
| ***ADVISORS*** | |
| Shankaran V. | 9886659227 |
| Prabhakar H.C. | 9886035210 |
| Ramaswamy K. | 9909948237 |
| Karanth B.D. | 9945802609 |
| Ramachandra Shastry K. | 9448910012 |
| Chandra Kumar H.V. | 9341628718 |
| Koushalendra S.A.P. | 9481487304 |
| Narayanan R. | 9341261659 |
| V. Ranganatha Murali (Audit) | 9844033971 |
| Dr. Sudheendra Bhat (Legal) | 9845103951 |

### Viprabandhu Editorial Committee

| | |
|---|---|
| Sridhar Rao H. | 9632211611 |
| Dr. Shyam Sundar G. | 9448676442 |
| Natesh G.S. | 9448777770 |
| Narasimhaiah V. | 9449028618 |

hsr.viprabandhu@gmail.com


# ಅಧ್ಯಕ್ಷರ ನುಡಿ

ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘದ ಎಲ್ಲಾ ವಿಪ್ರ ಸದಸ್ಯಬಂಧುಗಳಿಗೆ ನಮಸ್ಕಾರಗಳು.

22 ಜನವರಿ 2024 ರಂದು ಇಡೀ ವಿಶ್ವವೇ ಆದರ್ಶ ಪುರುಷೋತ್ತಮ ಶ್ರೀರಾಮನನ್ನು ಅಯೋಧ್ಯೆಯಲ್ಲಿ ಪುನರ್ ಪ್ರತಿಷ್ಠಾಪಿಸಿ ಸಂಭ್ರಮಿಸಿದ ದಿನ. ಅಂತೆಯೇ ನಮ್ಮ ಸಂಘದ ವತಿಯಿಂದ ಸೆಕ್ಟರ್1 ರ ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಶ್ರೀರಾಮತಾರಕ ಯಜ್ಞವನ್ನು ಯಶಸ್ವಿಯಾಗಿ ನಡೆಸಿದೆವು. ಪ್ರತಿಷ್ಠಾನದ ಆವರಣದಲ್ಲಿ 350 ಹೆಚ್ಚು ಭಕ್ತರು ಅಯೋಧ್ಯೆಯಲ್ಲಿ ಜರುಗಿದ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ನೋಡಿ ಕಣ್ತುಂಬಿಸಿ ಕೊಂಡ ಕ್ಷಣವನ್ನು ನಾವು ಎಂದಿಗೂ ಮರೆಯಲಾರೆವು. ಈ ಕಾರ್ಯಕ್ರಮವನ್ನು ತುಂಬಾ ಅದ್ದೂರಿಯಾಗಿ ಜರುಗಿಸಲು ಸಹಕರಿಸಿದ ಶ್ರೀ ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ರಾದ ಶ್ರೀ ಗೋಕುಲ್ ನಾಥ್ ಹಾಗೂ ಅವರ ಸಹ ಸದಸ್ಯರ ಸಹಕಾರಕ್ಕೆ ತುಂಬು ಹೃದಯದ ಧನ್ಯವಾದಗಳು.

ಫೆಬ್ರವರಿ 8 ರಂದು ಮಹಾಶಿವರಾತ್ರಿ ಪ್ರಯುಕ್ತ ಶ್ರೀಯುತ ಶ್ರೀರಾಮಚಂದ್ರ ಶಾಸ್ತ್ರಿ ಅವರ ನೇತೃತ್ವದಲ್ಲಿ ಪರಮೇಶ್ವರನಿಗೆ ಸಂಘದ ವತಿಯಿಂದ ವೇದಬಂಧುಗಳ ಸಹಕಾರದಲ್ಲಿ ಲಘುನ್ಯಾಸಪೂರ್ವಕ ರುದ್ರಾಭಿಷೇಕವನ್ನು ಭಕ್ತಿ ಶ್ರದ್ಧೆಗಳಿಂದ ಆಚರಿಸಲಾಯಿತು.

ಫೆಬ್ರವರಿ 16 ರಂದು ರಥಸಪ್ತಮಿ. ವೇದ ಗುರುಗಳ ಸಮ್ಮುಖದಲ್ಲಿ ಪ್ರತಿವರ್ಷದಂತೆ ಅರುಣಪ್ರಶ್ನ ಪಾರಾಯಣದೊಂದಿಗೆ ಸೂರ್ಯ ನಮಸ್ಕಾರ ಮಾಡುವುದರ ಮೂಲಕ ಆಚರಿಸಲಾಯಿತು.

ಫೆಬ್ರವರಿ 18 ರಂದು ಮಧ್ವನವಮಿ. ಸಂಘದ ಆಶ್ರಯದಲ್ಲಿ ಮಧ್ವಾಚಾರ್ಯರ ಕಂಚಿನ ಪ್ರತಿಮೆಗೆ ಮಧುಸಹಿತ ಫಲ ಪಂಚಾಮೃತ ಅಭಿಷೇಕ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಹರಿವಾಯು ಸ್ತುತಿ, ಸುಮಧ್ವವಿಜಯ ಪಾರಾಯಣ, ಅಷ್ಟೋತ್ತರ ನಾಮಾವಳಿ ಪುಷ್ಪಾರ್ಚನೆ ಹಾಗೂ ಪಂಡಿತ್ ವಿಠ್ಠಲ ಆಚಾರ್ಯರವರಿಂದ ಆನಂದತೀರ್ಥರ ಮಹಿಮೆ ಬಗ್ಗೆ ಪ್ರವಚನ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಮೂಡಿ ಬಂದವು. ಸದಸ್ಯರಾದ ಶ್ರೀ ರಂಗರಾವ್ ದಂಪತಿ ಹಾಗೂ ಶ್ರೀಯುತ ರಂಗನಾಥ್ ಮುರಳಿ ಅವರ ನೇರ ಸಹಭಾಗಿತ್ವದಲ್ಲಿ ಕಾರ್ಯಕ್ರಮವು ಎಲ್ಲ ಸದಸ್ಯರ ಸಹಕಾರದಲ್ಲಿ ಅದ್ದೂರಿಯಾಗಿ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲಾ ವಿಪ್ರಬಂಧುಗಳಿಗೆ ಧನ್ಯವಾದಗಳು.

ಇದೆ ರೀತಿಯಲ್ಲಿ ಮುಂಬರುವ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೂ ನಿಮ್ಮ ಪ್ರೋತ್ಸಾಹ, ಸಹಕಾರ ಸದಾಕಾಲವೂ ಲಭಿಸುತ್ತದೆ ಎಂದು ಆಶಿಸುತ್ತೇನೆ. ಕ್ರೋಧಿನಾಮ ಸಂವತ್ಸರದ ಚಾಂದ್ರಮಾನ ಯುಗಾದಿ ಹಾಗೂ ಶ್ರೀರಾಮನವಮಿಯ ಶುಭಾಶಯಗಳು.

|| ಸರ್ವೇಜನಾಃ ಸುಖಿನೋ ಭವಂತು || ಧನ್ಯವಾದಗಳು.

ಅನಂತರಾಮು ಎಸ್.
ಅಧ್ಯಕ್ಷರು, ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ

# ಕಾರ್ಯದರ್ಶಿ ವರದಿ

ಸನ್ಮಾನ್ಯ ಗೌರವಾನ್ವಿತ ವಿಪ್ರಬಂಧುಗಳೇ,

ಮುಂಬರುವ ಹಬ್ಬ ಹರಿದಿನಗಳು ತಮ್ಮೆಲ್ಲರಿಗೂ ಶುಭವನ್ನು ತರಲೆಂದು ದೇವರಲ್ಲಿ ಪ್ರಾರ್ಥಿಸಿ 2024 ನೇ ವರ್ಷದ ಈ 2ನೇ ತ್ರೈಮಾಸಿಕ ಕಾರ್ಯದರ್ಶಿ ವರದಿಯನ್ನು ತಮ್ಮ ಮುಂದಿಡುತ್ತಿದ್ದೇನೆ.

22/01/2024ರ ಸೋಮವಾರದಂದು. ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘದ ಸಹಯೋಗದಲ್ಲಿ ಶ್ರೀ ರಾಮತಾರಕ ಹೋಮವನ್ನು ಹೆಚ್.ಎಸ್. ಆರ್.ಲೇಔಟ್‌ನ, 1ನೇ ಸೆಕ್ಟರ್‌ನಲ್ಲಿರುವ ಶ್ರೀ ವಿನಾಯಕ ದೇವ ಸ್ಥಾನದಲ್ಲಿ ಜರುಗಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 350 ಕ್ಕೂ ಹೆಚ್ಚಿನ ಭಕ್ತರು ಭಾಗವಹಿಸಿದ್ದರು. ಸಂಜೆ ಶ್ರೀ ವಿನಾಯಕ ಭಜನಾ ಮಂಡಳಿಯವರಿಂದ ಭಜನೆ ಹಾಗು ಎಸ್.ಎಲ್.ಎನ್. ವೇದಪಾಠಶಾಲೆಯ ವೇದಬಂಧುಗಳಿಂದ ವೇದ ಪಾರಾಯಣ ಕಾರ್ಯಕ್ರಮವನ್ನೂ ನಡೆಸಲಾಯಿತು.

16/02/2024ರಂದು ರಥಸಪ್ತಮಿಯ ಪ್ರಯುಕ್ತ ಸಂಘದ ಗಾಯತ್ರೀ ಭವನದಲ್ಲಿ ಪೂಜ್ಯ ವೇದಗುರುಗಳಾದ ವಿದ್ವಾನ್ ಶ್ರೀ ಕೆ.ಎಸ್. ರಾಮಕೃಷ್ಣರವರ ನೇತೃತ್ವದಲ್ಲಿ ಅರುಣ ಪಾರಾಯಣ ಸಹಿತ ಸೂರ್ಯ ನಮಸ್ಕಾರಗಳನ್ನು ಬೆಳಿಗ್ಗೆ ಹಮ್ಮಿಕೊಳ್ಳಲಾಗಿತ್ತು.

18/02/2024ರ ಭಾನುವಾರದಂದು ಸಂಘದ ವತಿಯಿಂದ ಶ್ರೀ ಮಧ್ವನವಮಿಯ ಪ್ರಯುಕ್ತ ವೇದಘೋಷ, ಲಕ್ಷ್ಮೀನಾರಾಯಣ ಪೂಜೆ, ಹರಿವಾಯುಸ್ತುತಿ ಪಾರಾಯಣ, ಸುಮಧ್ವ ವಿಜಯ ಪಾರಾಯಣವನ್ನು ನಡೆಸಲಾಯಿತು. ಪಂಡಿತ್ ಶ್ರೀ ವಿಠ್ಠಲ ಆಚಾರ್ಯ ರವರಿಂದ ಆನಂದತೀರ್ಥರ ಮಹಿಮೆ ಬಗ್ಗೆ ಪ್ರವಚನ ವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 80 ಕ್ಕೂ ಹೆಚ್ಚಿನ ಭಕ್ತರು ಪಾಲ್ಗೊಂಡಿದ್ದರು.

ದಿನಾಂಕ 08.03.2024ರ ಶುಕ್ರವಾರದಂದು ಬೆಳಿಗ್ಗೆ 9.00 ಗಂಟೆಗೆ ಶ್ರೀ ಮಹಾಶಿವರಾತ್ರಿ ಪ್ರಯುಕ್ತ ಸಂಘದ ವತಿಯಿಂದ ರುದ್ರಾಭಿಷೇಕವನ್ನು ಶ್ರೀ ರಾಮಚಂದ್ರ ಶಾಸ್ತ್ರಿ ಕೆ. ರವರ ನೇತೃತ್ವದಲ್ಲಿ ಜರುಗಿಸಲಾಯಿತು. ಸುಮಾರು 80 ಸಂಘದ ಸದಸ್ಯರು ಮತ್ತು ಕುಟುಂಬ ವರ್ಗದವರು ಶ್ರೀ ಸರ್ವೇಶ್ವರ ಚಂದ್ರಮೌಳೇಶ್ವರ ಸ್ವಾಮಿಗೆ ಅಭಿಷೇಕವನ್ನು ಮಾಡಿ ದೇವರ ಕೃಪೆಗೆ ಪಾತ್ರರಾದರು.

## ನೂತನವಾಗಿ ನಮ್ಮ ಸಂಘಕ್ಕೆ ಆಗಮಿಸಿದ ಸದಸ್ಯರು
### (26/12/2023 ರಿಂದ 25/03/2024 ರವರೆಗೆ)

1. ಶ್ರೀ ಎಸ್. ಭಾಸ್ಕರ್ — ಸ. ಸಂಖ್ಯೆ, 766 dt: 10/2/2024
2. ಶ್ರೀ ಎನ್.ರಘುನಾಥ್ — ಸ. ಸಂಖ್ಯೆ 767 dt: 10/02/2024.
3. ಶ್ರೀ ಕೆ.ಎಸ್.ಕುಮಾರ್ — ಸ. ಸಂಖ್ಯೆ 768 dt: 10/02/2024
4. ಶ್ರೀ ರಸೋಜಿತ್ ವಿವೇಕ್ ಕುಮಾರ್ ಸ. ಸಂಖ್ಯೆ 769 dt: 10/02/24
5. ಶ್ರೀಮತಿ.ವಿಮಲ — ಸ. ಸಂಖ್ಯೆ 770 dt: 10/02/24
6. ಶ್ರೀ ಸುಭಾಷ್ ಅಯ್ಯರ್ — ಸ. ಸಂಖ್ಯೆ, 771 dt: 04/03/20, ಪೋಷಕರು
7. ಶ್ರೀ ಸಿ.ವಿ.ದಿವಾಕರ್ — ಸ. ಸಂಖ್ಯೆ 772 dt: 04/03/24.
8. ಶ್ರೀ ಸಂಕರನ್ — ಸ. ಸಂಖ್ಯೆ 773 dt: 04/03/24
9. ಶ್ರೀ ಡಾ||ಎನ್. ಶ್ಯಾಂ ಭಟ್. — ಸ. ಸಂಖ್ಯೆ 774 dt: 04/03/24, ಪೋಷಕರು.

ಸಂಘದ ಸದಸ್ಯರುಗಳಾದ ಆರ್.ಎನ್. ನಾಗರಾಜ್ ಮತ್ತು ಸುಬ್ಬರಾವ್.ಎ.ಹೆಚ್. ಮತ್ತು ಗೋಕುಲನಾಥ್ ಅವರುಗಳು ದೈವಾಧೀನರಾದರೆಂದು ತಿಳಿಸಲು ನಾವು ವಿಷಾಧಿಸುತ್ತೇವೆ.

ಇಂತಿ ತಮ್ಮವ,

ಕಾರ್ಯದರ್ಶಿ


VIVEKANANDAHEALTH®
GLOBAL
AYURVEDA | YOGA | NATUROPATHY
We are a chain of Integrative Medicine Centers, Headquartered in Bengaluru



Centers in Bengaluru: HSR and HRBR layout

WE OFFER
◆ Preventive Healthcare Services:
Prevent Diabetes, Hypertension, Hypothyroidism, PCOS, Obesity
◆ Healing Solutions:
Cervical & Lumbar Spondylitis, Sciatica, Arthritis, Migraine Headache, PCOS, Infertility
◆ Corporate Health and Well-being Programs:
Spine Health, Eye Health, Stress Management, Women Health

To Associate Call – +91 9901483222
To Consult Doctors Call –+ 919591336226
www.vivekanandahealth.com

## ಪ್ರಕಟಣೆ

ಹೆಚ್. ಎಸ್. ಆರ್. ಬಡಾವಣೆ ಬ್ರಾಹ್ಮಣ ಸಂಘವು ಯೂಟ್ಯೂಬ್ ಚಾನೆಲ್‌ನ್ನು ತೆರೆದಿದೆ. ನಮ್ಮೆಲ್ಲಾ ಕಾರ್ಯಕ್ರಮವನ್ನು ವೀಕ್ಷಿಸಲು ನಮಗೆ ನಿಮ್ಮ ಬೆಂಬಲದ ಅಗತ್ಯವಿದೆ. ದಯವಿಟ್ಟು, ನಮ್ಮ **HSRBBS Youtube Channel** ಗೆ ಚಂದಾದಾರರಾಗಿ. ಮೇಲೆ ನೀಡಿರುವ **QR CODE**ನ್ನು ಸ್ಕ್ಯಾನ್ ಮಾಡಲು ಕೋರಲಾಗಿದೆ.

## ಸೂಚನೆ

ಹೆಚ್. ಎಸ್. ಆರ್. ಬಡಾವಣೆ ಬ್ರಾಹ್ಮಣ ಸಂಘ ಹಾಗೂ ಆರ್ಷ ಸೇವಾ ಕೇಂದ್ರಂ ಸಹಯೋಗದಲ್ಲಿ ದಿನಾಂಕ 8 ಏಪ್ರಿಲ್ ನಿಂದ 26 ಏಪ್ರಿಲ್ 2024 ರವರೆಗೆ ಉದ್ಯೋಗ ಮೇಳ ಹಾಗೂ ಮಕ್ಕಳಿಗೆ ಯೋಗ ರಾಮಾಯಣ ಸಮ್ಮರ್ ಕ್ಯಾಂಪ್ ಆಯೋಜಿಸಿದೆ.

ಹೆಚ್ಚಿನ ವಿವರಗಳಿಗೆ ಪು. 11ನ್ನು ನೋಡಿ.

## ಸದಸ್ಯರಲ್ಲಿ ವಿನಂತಿ..

ಸಂಘದ **ಗಾಯತ್ರಿ ಭವನವನ್ನು** (ನಂ. 56, 4ನೇ ಮಹಡಿ, 31ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಹೆಚ್.ಎಸ್.ಆರ್ 2ನೇ ಸೆಕ್ಟರ್, ಬೆಂಗಳೂರು-560102) ಶುಭ ಕಾರ್ಯಕ್ರಮಗಳಿಗೆ (ಹುಟ್ಟಿದ ಹಬ್ಬ, ದೇವತಾ ಪೂಜಾ, ಪ್ರವಚನ ಇತ್ಯಾದಿ) ಸಂಘದ ಸದಸ್ಯರು ಹಾಗೂ ಕುಟುಂಬವರ್ಗದವರಿಗೆ ನಿಗದಿತ ದಾನ ಪಾವತಿ ಮೇರೆಗೆ ಕೆಳಕಂಡ ನಿಬಂಧನೆಗಳೊಂದಿಗೆ ನೀಡಲಾಗುತ್ತದೆ.

★ ಬೆಳಿಗ್ಗೆ 6.30ರಿಂದ ಸಂಜೆ 4.00ರ ತನಕ.

★ 80-100 ಜನಗಳ ವರೆಗೆ ಮಾತ್ರ ಅವಕಾಶ

★ 10 ಡೈನಿಂಗ್ ಟೇಬಲ್‌ಗಳು, 60 ಕುರ್ಚಿಗಳು ಹಾಗೂ 4 ದೊಡ್ಡ ಜಮಖಾನಗಳ ಸೌಲಭ್ಯವಿದೆ.

★ ವೆಜಿಟೇರಿಯನ್ ಕ್ಯಾಟರಿಂಗ್ ವ್ಯವಸ್ಥೆ ಮಾಡಿಕೊಳ್ಳ ಬೇಕಾಗುತ್ತದೆ (ಅಡಿಗೆ ಮಾಡಲು ಅವಕಾಶವಿರುವುದಿಲ್ಲ).

★ ಕ್ಲೀನಿಂಗ್ ವ್ಯವಸ್ಥೆ ನಿಮ್ಮದಾಗಿರುತ್ತದೆ.

★ ಕಾರ್ಯಕ್ರಮಕ್ಕೆ ಬರುವವರು ತಮ್ಮ ಕಾರುಗಳನ್ನು ಪೋಸ್ಟ್ ಆಫೀಸ್ ಎದುರು ಅಥವಾ ಗಾಯತ್ರೀ ಭವನದ ಹಿಂಭಾಗದ ರಸ್ತೆಯಲ್ಲಿ ನಿಲ್ಲಿಸಬೇಕಾಗುತ್ತದೆ.

★ ಒಂದು ರೂಮನ್ನು ನೀಡಲಾಗುವುದು

★ ದಾನ ಪಾವತಿ ವಂತಿಕೆ - ರೂ.3500 / - + ಕ್ಲೀನಿಂಗ್ ಚಾರ್ಜಸ್ ರೂ.500 / - ಒಟ್ಟು-ರೂ. 4000 / -ಮಾತ್ರ

ವಿವರಗಳಿಗೆ ಮತ್ತು ಕಾದಿರಿಸುವಿಕೆಗಾಗಿ ಕಾರ್ಯದರ್ಶಿಗಳನ್ನು ಸಂಪರ್ಕಿಸಿ.
ವಂದನೆಗಳೊಂದಿಗೆ.

- ಕಾರ್ಯದರ್ಶಿ

*Suresh Hegde Kadathoka*

Mob : 9986509511
9945089428 / 9448689300

**SHRI RAMANUGRAHA CATERERS**

We undertake Pure Vegetarian Catering for all occasions such as

WEDDING–UPANAYANAM–HOUSE WARMING-NAMING CEREMONY

'Sri Rama Krupa', # 24, Opp. Vishwapriya Digital Studio Road,
Patel Layout, Begur, Bangalore-560 068

# ಸಂಪಾದಕೀಯ

ಭಾರತದ ಇತಿಹಾಸದಲ್ಲಿ, 2024 ನೇ ಇಸವಿಯ ಜನವರಿ ತಿಂಗಳ 22ನೆ ತಾರೀಖು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂತಹ ಸುದಿನ. ಪುರುಷೋತ್ತಮ ಶ್ರೀ ರಾಮಚಂದ್ರನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಅಭೂತಪೂರ್ವ, ಅದ್ವಿತೀಯ ಶ್ರೀರಾಮಲಲ್ಲಾ ದೇವಸ್ಥಾನದ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ.

ತ್ರೇತಾಯುಗದಲ್ಲಿಯೇ, ರಾಕ್ಷಸರನ್ನು, ದುಷ್ಟ ಶಕ್ತಿಗಳನ್ನು ನಿರ್ಮೂಲನಮಾಡಿ, ಪ್ರಜಾಪರಿಪಾಲನೆ ಮತ್ತು ರಾಜ್ಯಭಾರವನ್ನು ಹೇಗೆ ಮಾಡಬೇಕೆಂಬ ಮಾರ್ಗದರ್ಶನವನ್ನು ಮನುಕುಲಕ್ಕೆ ಮಾಡಿಕೊಟ್ಟ ರಘುಕುಲತಿಲಕ ಶ್ರೀ ರಾಮಚಂದ್ರನ ರಾಜ್ಯಭಾರ ಇಂದಿಗೂ ಕೂಡ 'ರಾಮರಾಜ್ಯ' ವೆಂದೇ ಪ್ರತೀತಿ. ಈ ಧರೆಯನ್ನು ಎಷ್ಟೆಷ್ಟೋ ರಾಜ, ಮಹಾರಾಜರು ಆಳಿದ್ದಾರೆ, ಪ್ರಸಿದ್ಧಿ ಪಡೆದಿದ್ದಾರೆ. ಆದರೆ ಶ್ರೀ ರಾಮನ ರಾಮರಾಜ್ಯ ಎಲ್ಲರಿಗೂ, ಅನವರತವೂ ಮಾದರಿಯೇ, ಪ್ರೇರಣೆಯೇ.

ಐದು ಶತಮಾನಗಳಿಗೂ ಹಿಂದೆ ಮುಸಲ್ಮಾನರ ಆಕ್ರಮಣಕ್ಕೆ ಒಳಗಾಗಿ, ತನ್ನ ಅಸ್ಥಿತ್ವವನ್ನು ಕಳೆದುಕೊಂಡಿದ್ದ ಶ್ರೀರಾಮನ ಜನ್ಮಸ್ಥಾನದ ಪುನರುತ್ಥಾನ, ಮತ್ತು ರಾಮಲಲ್ಲಾನನ್ನು ಪುನರ್ ಪ್ರತಿಷ್ಠಾಪಿಸುವುದೆಂದರೆ ಎಷ್ಟೊಂದು ಸಂಭ್ರಮ. ಎಷ್ಟೋ ರಾಮಭಕ್ತರ, ಪ್ರಸ್ತುತ ಕೇಂದ್ರ ಸರ್ಕಾರ ಹಾಗು ಮಾನ್ಯ ಪ್ರಧಾನ ಮಂತ್ರಿಗಳ ಸತತ ಪರಿಶ್ರಮದ ಫಲವಾಗಿ, ಮಾದರಿ ರಾಮರಾಜ್ಯ ಪರಿಕಲ್ಪನೆಯ ನಿಟ್ಟಿನಲ್ಲಿ, ದಿಟ್ಟ ಹೆಜ್ಜೆಯನ್ನಿಟ್ಟು ಸಾಂಕೇತಿಕವಾಗಿ ಶ್ರೀ ರಾಮಲಲ್ಲಾನ ಪ್ರತಿಷ್ಠಾಪನೆಯನ್ನು ದೃಶ್ಯ ಮಾಧ್ಯಮದ ಮುಖಾಂತರ ನೋಡುವ ಸೌಭಾಗ್ಯ ನಮ್ಮೆಲ್ಲರದಾಗಿತ್ತು.

ನಮ್ಮ ಸಂಘ, ಶ್ರೀ ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಿಂದ ಹಮ್ಮಿಕೊಂಡ 'ರಾಮ ತಾರಕ ಹೋಮದ ಪೂರ್ಣಾಹುತಿ ವೇಳೆಗೆ ಸರಿಯಾಗಿ, ಪ್ರಧಾನ ಮಂತ್ರಿಗಳಿಂದ ರಾಮಲಲ್ಲಾನ ಪ್ರಾಣಪ್ರತಿಷ್ಠಾಪನೆಯೂ ಸಮ್ಮಿಳಿತವಾಗಿ ನೆರೆದಿರುವ ಭಕ್ತಸಮೂಹದ ಕಣ್ಣಂಚಿನಲ್ಲಿ ಆನಂದಬಾಷ್ಪ! ಹೃದಯಾಂತರಾಳದಲ್ಲಿ ಭಕ್ತಿಭಾವದ ಸಂಚಲನ! ಅದೊಂದು ಅಮೋಘ ಕ್ಷಣ ಜೀವಿತದಲ್ಲಿ ಬರುವ ಅಪರೂಪದ ಕ್ಷಣವಾಗಿತ್ತು.

200 ಭಕ್ತರು ಬಂದಾರೆಂದು ಅಂದಾಜಿಸಿದ್ದ ನಮಗೆ 350 ಕ್ಕೂ ಮಿಗಿಲಾದ ಭಕ್ತ ಸಮೂಹಕ್ಕೆ ತಮ್ಮ ಸಮಯ ಪ್ರಜ್ಞೆಯಿಂದ ವಿನಾಯಕ ಪ್ರತಿಷ್ಠಾನದ ಆಡಳಿತ ವರ್ಗ ಅಚ್ಚುಕಟ್ಟಾಗಿ ಅನ್ನ ಸಂತರ್ಪಣೆ ಮಾಡಿಸಿದ್ದು ಒಂದು ಪವಾಡವೇ ಸರಿ! ನೆರೆದ ಭಕ್ತರ ಪುಣ್ಯವೂ ಕೂಡ!! ಈ ಒಂದು ಅಮೂಲ್ಯ ದಿನವನ್ನು ಪುಣ್ಯ ಕಾರ್ಯಕ್ರಮಗಳಲ್ಲಿ ಕಳೆಯುವ ಭಾಗ್ಯ ಕೂಡಿ ಬಂದದ್ದು ನಮ್ಮ ಪೂರ್ವಾರ್ಜಿತ ಪುಣ್ಯವೇ ಸೈ. ಜೈ ಶ್ರೀರಾಂ.

ಈ ಸಂಚಿಕೆಯಿಂದ 'ನಮ್ಮ ಪ್ರತಿಭೆಗಳು' ಎಂಬ ಅಂಕಣವನ್ನು ಆರಂಭಿಸಿದ್ದೇವೆ. ಈ ಅಂಕಣದಲ್ಲಿ ಶ್ರೀಮತಿ ರೂಪ ಗುರುರಾಜ್ ಅವರನ್ನು ಪರಿಚಯಿಸುತ್ತಿದ್ದೇವೆ. ನಿಮ್ಮ ಗಮನದಲ್ಲಿರುವ ಇತರ ಪ್ರತಿಭೆಗಳನ್ನು ದಯವಿಟ್ಟು ನಮಗೆ ಪರಿಚಯಿಸಿ ಎಂದು ವಿನಂತಿಸುತ್ತೇವೆ.

ಸರ್ವರಿಗೂ ಯುಗಾದಿ ಹಬ್ಬ ಹಾಗು ರಾಮೋತ್ಸವದ ಶುಭ ಕಾಮನೆಗಳು.

ಹೆಚ್. ಶ್ರೀಧರ ರಾವ್
ಸಂಪಾದಕೀಯ ಮಂಡಳಿ ಪರವಾಗಿ

Sankalp Nethralaya & Polyclinic
NABH CERTIFIED
ISO 9001 : 2017
(A UNIT OF SUBHSANKALP NETHRALAYA & POLYCLINIC PVT. LTD.)
One Stop Solution For All Eye Related Problems & Surgeries
Centre Of Excellence For Laser Cataract Surgeries
Cashless Facility available for all Major TPA Insurance
SN1: 85/1 19th Main Road, Sector 1, HSR Layout, Bangalore - 560102 Tel: 080 22580466 | Mob: 9739724666
SN2: #87, Ground Floor, Ashraya Building, Central Jail Road, Naganathpura, Electronic City Post; Bangalore - 560100 Tel: 080 25735556 | Mob: 8147323555
Email: sankalpnethralaya@gmail.com
Timings : 10am to 8pm

ANAND DIAGNOSTIC LAB
A Neuberg Associate
In Association with SANKALP DIAGNOSTIC LAB
Now at HSR Layout
# 511, 15th C Main, 15th Cross, Sector 4, HSR Layout, Bangalore 560 102.
For all Blood Investigations, ECG & Ultra Sound
Ph : 080 4147 9460 / Mob : 89511 64466
Timings : 7am to 7pm

# ವೇದ ಅಧ್ಯಯನ – ಒಂದು ಅನುಭವ

ಗೆಳೆಯ ಅಚ್ಯುತ್ ಹೊಸೂರ್ ಬಂದು, ಕೇಳ್ರಪ್ಪಾ, ಇಲ್ಲಿಯೇ ಹೆಚ್‌ಎಸ್‌ಆರ್ ಲೇಔಟ್, 30ನೇ ಮೈನ್ ಬಳಿ ಗಾಯತ್ರೀ ಭವನದಲ್ಲಿ ವೇದತರಗತಿ ನಡೆಯುತ್ತಿದೆ, ಎಲ್ಲಾ ಸೇರಿಕೊಳ್ಳೋಣ ಎಂದಾಗ ಸುಬ್ರಮಣ್ಯ, ಶ್ರೀಧರ, ಮತ್ತು ನನಗೆ ಆಶ್ಚರ್ಯ ಮತ್ತು ಸಂತಸವಾಯಿತು. ಕೂಡಲೇ ಗಾಯತ್ರೀ ಭವನಕ್ಕೆ ಭೇಟಿ ಕೊಟ್ಟು, ಬ್ರಾಹ್ಮಣ ಸಂಘದ ಸದಸ್ಯತ್ವವನ್ನು ಪಡೆದು ವೇದ ತರಗತಿಗೆ ಸೇರಿಕೊಂಡೆವು.

ಉದ್ಯೋಗ ನಿಮಿತ್ತ ಬೇರೆ ದೇಶಗಳಲ್ಲಿ ನೆಲೆಸಿದ ಕಾರಣ ಮತ್ತು ಕೆಲಸದ ಒತ್ತಡದಿಂದ ಬ್ರಾಹ್ಮಣ ರೀತಿ, ರಿವಾಜುಗಳಿಂದ ನಾನು ದೂರವಾಗಿದ್ದೆ. ಆದರೆ ಇತ್ತೀಚಿನ ಕೆಲವು ವರ್ಷಗಳಿಂದ ವೇದ ಮಂತ್ರ, ಕಲಿಯಬೇಕೆಂಬ ತುಡಿತ, ಇಚ್ಛೆ ಬಲವಾಗಿ ಮನಸ್ಸಲ್ಲಿತ್ತು. ಅದಕ್ಕಾಗಿ ಯೋಗ್ಯ ಗುರುವಿನ ಹುಡುಕಾಟದಲ್ಲಿದ್ದೆ.

ಗುರೂಜೀ ವಿದ್ವಾನ್ ರಾಮಕೃಷ್ಣ ಭಟ್ ನೇತೃತ್ವದಲ್ಲಿ ಗಾಯತ್ರೀ ಭವನದಲ್ಲಿ ನಡೆಯುತ್ತಿರುವ ವೇದ ತರಗತಿ ನನಗೆ ದೊರೆತಿದ್ದು ನನ್ನ ಪಾಲಿನ ಅದೃಷ್ಟವೇ ಸರಿ. ಗುರುಗಳ ಜ್ಞಾನದ ಆಳ, ಅಗಲ ಮಹತ್ತರವಾಗಿದ್ದರೂ ಅವರು ಎಲ್ಲರನ್ನೂ (ಬಾಲಕರು, ಮಧ್ಯ ವಯಸ್ಕರು, ಮತ್ತು ಹಿರಿಯರು, ವೇದ ಗೊತ್ತಿರುವವರು, ಗೊತ್ತಿಲ್ಲದವರು) ಸರಿ ಸಮನಾಗಿ ನಡೆಸಿಕೊಂಡು ತಮ್ಮ ಹಾಸ್ಯ ಮಿಶ್ರಿತ ಶೈಲಿಯಿಂದ ತಮ್ಮ ಅಗಾಧ ಜ್ಞಾನವನ್ನು ನಮಗೆಲ್ಲಾ ನಿಸ್ವಾರ್ಥವಾಗಿ ಹಂಚುತ್ತಿದ್ದಾರೆ. ವೇದ ಮಂತ್ರ, ಪುರಾಣ, ಮಂಕುತಿಮ್ಮನ ಕಗ್ಗ, ಮತ್ತು ಅಂಗ್ಲಲೇಖಕರ ಜ್ಞಾನವನ್ನು ನಿರರ್ಗಳವಾಗಿ ಬಹಳ ಸ್ಪಷ್ಟವಾಗಿ, ನಮ್ಮ ಮನಮುಟ್ಟುವಂತೆ ತಮ್ಮ ಜ್ಞಾನವನ್ನು ಧಾರೆ ಎರೆಯುತ್ತಿದ್ದಾರೆ.

ನಾನಂತೂ ಪ್ರತಿ ಶನಿವಾರ, ಆದಿತ್ಯವಾರ ಯಾವಾಗ ಬರುತ್ತದೆ ಎಂದು ಎದುರು ನೋಡುತ್ತಿರುತ್ತೇನೆ. ಸುಮಾರು 20–30 ಮಕ್ಕಳು, ಮಧ್ಯವಯಸ್ಕರು, ಹಿರಿಯರು ಜೊತೆಯಾಗಿ ವೇದಪಠಣ ಮಾಡುವಾಗ ಸಿಗುವ ಅನುಭವ, ರೋಮಾಂಚಕ! ಅವರ್ಣನೀಯ!! ಅದನ್ನು ಸ್ಥಳದಲ್ಲೇ ಅನುಭವಿಸಬೇಕು. ಅದಕ್ಕೂ ಭಾಗ್ಯ ಪಡೆದುಕೊಂಡು ಬಂದಿರಬೇಕು. ಸಂತಸದ ಸಂಗತಿ ಏನಂದರೆ, ವಯಸ್ಸಿನ ನಿರ್ಬಂಧಗಳಿಲ್ಲದೆ ತರಗತಿಗೆ ಬರುವ ವೇದಬಂಧುಗಳ ಸಾಮೂಹಿಕ ಉತ್ಸಾಹ ಎಲ್ಲರನ್ನೂ ಹುರಿದುಂಬಿಸುತ್ತದೆ. ಇನ್ನೊಂದು ಮುಖ್ಯ ವಿಷಯ, ನಾವು ಕಲಿತ ವೇದ ಪಠಣವನ್ನು ಕೆಲವೊಂದು ಸ್ಥಳಿಯ ದೇವಸ್ಥಾನ, ಸಮಾರಂಭಗಳಲ್ಲಿ ಸಾರ್ವಜನಿಕವಾಗಿ ಸಾಮೂಹಿಕ ಪಠಣ ಮಾಡಲು ದೊರೆತ ಸಂದರ್ಭ, ಹೆಮ್ಮೆಯಿಂದ ನಾನು ಬ್ರಾಹ್ಮಣ ಎಂದು ಹೇಳಿಕೊಳ್ಳಲು ಸಹಕಾರಿಯಾಗಿದೆ.

ವಾರದಲ್ಲಿ ಸುಮಾರು 6–7 ಗಂಟೆಗಳನ್ನು ವೇದ ಮಂತ್ರಗಳ ಪಠನಕ್ಕಾಗಿ ಮೀಸಲಿಟ್ಟಿದ್ದೇನೆ. ಬದಲಾವಣೆ ಜಗದ ನಿಯಮ. ನನ್ನ ಈ ಬದಲಾವಣೆ ಕಂಡು ಮೊದಲು ಅಶ್ಚರ್ಯ ಪಟ್ಟರೂ, ನನ್ನ ಧರ್ಮಪತ್ನಿ ಇದಕ್ಕೆ ಬೆಂಬಲ ಕೊಟ್ಟು ನನ್ನ ಸಂತಸದಲ್ಲಿ ಭಾಗಿಯಾಗಿದ್ದಾಳೆ. ನನ್ನ ಮಗ ನನ್ನ ಜೊತೆಗೆ ಸಂಧ್ಯಾವಂದನೆ ಆರಂಭಿಸಿದವನು ಈಗ ಸ್ವತಂತ್ರವಾಗಿ ಸಂಧ್ಯಾವಂದನೆ ಮಾಡುತ್ತಿದ್ದಾನೆ. ಅಣ್ಣ ಮತ್ತು ಅಕ್ಕ, ಇಬ್ಬರೂ ಈ ಬದಲಾವಣೆ ಕಂಡು ಖುಷಿ ಪಟ್ಟಿದ್ದಾರೆ.

ಈ ಅವಕಾಶ ಕಲ್ಪಿಸಿಕೊಟ್ಟ HSRBBS ಸಂಘಕ್ಕೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ಹಲವಾರು ಬ್ರಾಹ್ಮಣ ಸಂಘಗಳ ಬಗ್ಗೆ ಕೇಳಿದ್ದೇನೆ, ನೋಡಿದ್ದೇನೆ. ಆದರೆ ಈ ರೀತಿಯ ವೇದ ತರಗತಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಸಂಘವನ್ನು ನೋಡಿರುವುದು ಇದೇ ಮೊದಲು. ಏನೂ ಗೊತ್ತಿಲ್ಲದ ನನಗೆ, ಕೆಲವೇ ತಿಂಗಳುಗಳಲ್ಲಿ ಹಲವಾರು ಸೂಕ್ತಗಳನ್ನು (ಮೇಧಾ ಸೂಕ್ತ, ದುರ್ಗಾ ಸೂಕ್ತ, ಗಣೇಶ ಅಥರ್ವಶೀರ್ಷ, ಪುರುಷ ಸೂಕ್ತ, ನಾರಾಯಣ ಸೂಕ್ತ, ಶ್ರೀ ಸೂಕ್ತ, ಹಿರಣ್ಯಗರ್ಭ ಸೂಕ್ತ, ಶಾಂತಿ ಮಂತ್ರ ಇತ್ಯಾದಿ) ಸರಿಯಾದ ರೀತಿಯಲ್ಲಿ ಪಠಿಸುವಂತೆ ಮಾಡಿ, ನನ್ನ ಕುತೂಹಲವನ್ನು ಇನ್ನಷ್ಟು ಹೆಚ್ಚಿಸಿ, ಅವರ ತರಗತಿಗೆ ನಮ್ಮನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿರುವ ಗುರೂಜಿಗಳಿಗೆ ನನ್ನ ಗೌರವ ಪೂರ್ವಕ ಸಾಷ್ಟಾಂಗ ನಮಸ್ಕಾರಗಳು. ಇನ್ನೂ ವೇದ ತರಗತಿಗೆ ಯಾವುದೇ ನಿರ್ಧಾರವನ್ನು ಮಾಡದ ಬ್ರಾಹ್ಮಣ ಬಂಧುಗಳೇ, ನೀವೂ ಕೂಡ ಅಗತ್ಯವಾಗಿ ವೇದ ತರಗತಿಗೆ ಬನ್ನಿ, ಅಮೂಲ್ಯವಾದ ವೇದ ಪಠಣ ಮಾಡುವ ಅವಕಾಶವನ್ನು ಉಪಯೋಗಿಸಿಕೊಳ್ಳಿ.

*– ಗೋವಿಂದರಾಜು ಆಚಾರ್ಯ*

With Best Compliments From
DEEPAMM HOME APPLIANCE
A Convenient Destination for Affordable Household Products
HSR Layout Leading Home Appliances Shop
Wholesale & Retail dealers in: Grinder, Cooker, Fans, Non Stick Cookware, LPG Stove, All kinds of Home Appliances
GOOGLE MAPS
Butterfly Good for a lifetime | HAVELLS | SUJATA | BAJAJ | Crompton Greaves | Prestige | Preethi | Pigeon
MANGAMMANAPALYA MAIN ROAD, BANGALORE -560068
MOB: 90196 19182 / 99003 15425

# ನಮ್ಮ ಸಂಘದ ಮೊದಲ ತ್ರೈಮಾಸಿಕ ಕಾರ್ಯಕ್ರಮಗಳ ಚಿತ್ರಗಳು













# ನಮಸ್ತೇ ಅಸ್ತು ವಾಸ್ತುಪುರುಷಃ

ವಾಸ್ತು ಎನ್ನುವುದು ಏನು ? ವಸತಿಗೆ ಯೋಗ್ಯವಾಗಿರುವುದೆಲ್ಲಾ ವಾಸ್ತುವೆ, ಇತ್ತೀಚೆಗೆ ಅದರ ಕುರಿತಾದ ಭಯವೇ ಹೆಚ್ಚಾದ ಅಥವಾ ನಕಲಿ ವಾಸ್ತು ತಜ್ಞರ ಹಾವಳಿಯಿಂದ ತಪ್ಪಾದ ಮಾಹಿತಿಯಂತೂ ರವಾನೆಯಾಗುತ್ತಿರುವುದು ಕಳವಳದ ವಿಷಯ. ಋಗ್ವೇದದ ಏಳನೇ ಮಂಡಲದ ಸೂಕ್ತ ಗಳಲ್ಲಿ ತಿಳಿಸಿರುವಂತೆ.

ವಾಸ್ತೋಷ್ಪತೇ ಶಗ್ಮಯಾ ಸಂಸದಾ ತೇ ಸಕ್ಷೀಮಹಿ ರಣ್ವಯಾ ಗಾತುಮತ್ಯಾ ।
ಪಾಹಿ ಕ್ಷೇಮ ಉತ ಯೋಗೇ ವರಂ ನೋ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥

ಮನೆ ಎನ್ನುವುದು ಹೇಗಿರುತ್ತೆ ಎನ್ನುವುದನ್ನು ಇಲ್ಲಿ ಹೇಳಲಾಗಿದೆ. ನಮಗೆ ಕಂಡೊಡನೆ ಮನಸ್ಸನ್ನು ಆಕರ್ಷಿಸುತ್ತದೆಯಂತೆ ಅದನ್ನೇ ಇಲ್ಲಿ ರಣ್ವಯಾ ಎನ್ನಲಾಗಿದೆ. ರಮಣೀಯ ವಾಗುವ ಎನ್ನುವ ಅರ್ಥವನ್ನು ಕೊಡುವುದು. ಇನ್ನು ಶಗ್ಮಯಾ ಎನ್ನುವುದು ಸುಖವನ್ನು ಹೇಳುತ್ತದೆ. ಮನೆಯನ್ನು ಪ್ರವೇಶಿಸಿ ಅಲ್ಲಿ ಉಳಿದಾಗ ನಮಗೆ ಸುಖದ ಅನುಭವ ವಾಗಬೇಕಂತೆ. ಗಾತುಮತ್ಯಾ ಎಂದು ಹೇಳಿರುವುದು ಮನೆ ಇದ್ದರೆ ಅಲ್ಲಿ ಸುಖವಿದ್ದರೆ ಮತ್ತು ಆಕರ್ಷಕವಾಗಿದ್ದರೆ ಮಾತ್ರ ಸಾಲದು ಇಲ್ಲಿ ಸಂಪತ್ತು ಶೇಖರಣೆಯಾಗುತ್ತಿದ್ದರೆ ಮಾತ್ರ ಉಳಿದವು ಸುಸೂತ್ರವಾಗಿರುತ್ತವೆ ಎನ್ನುವುದು ಶಗ್ಮಯಾ ಎನ್ನುವುದರ ತಾತ್ಪರ್ಯ. ಪಾಹಿ ಕ್ಷೇಮ ಉತ ಯೋಗೇ ವರಂ ಇಲ್ಲಿ ಇವಿಷ್ಟೂ ಅಲ್ಲದೇ ನಮಗೆ ರಕ್ಷಣೆ ಬೇಕಾಗುತ್ತದೆ. ನಾವು ಮಾಡುವ ಉದ್ಯೋಗದಲ್ಲಿ, ಕಳ್ಳಕಾಕರು, ಬಿಸಿಲು, ಮಳೆ ಶೀತಗಳಿಂದಲೂ ರಕ್ಷಣೆ ಅತ್ಯವಶ್ಯ ಅವುಗಳು ದೊರಕಲಿ, ಮತ್ತು ನಾವು ಅಪೇಕ್ಷಿಸಿದ್ದು ಅತ್ಯಂತ ಸುಲಭವಾಗಿ ದೊರಕುವಂತಾಗಲಿ ಎನ್ನುವುದನ್ನೇ ಯೋಗೇ ಎಂದಿರುವುದು. ಹೀಗೆ ಒಂದು ಮನೆ ಮನೆಯ ಎಲ್ಲರನ್ನೂ ಸುಖ ಸಂತೋಷ ನೆಮ್ಮದಿಯಿಂದ ಬಾಳುವಂತೆ ಮಾಡಬಲ್ಲದು ಆದರೆ ಅದು ವಾಸ್ತೋಷ್ಪತಿಯ ಅಥವಾ ವಾಸ್ತು ದೇವನ ಅನುಗ್ರಹದಿಂದ ಎಂದಿರುವುದು ಅತ್ಯಂತ ಮಹತ್ವ ಪಡೆಯುತ್ತದೆ.

ವೇದದಲ್ಲಿ ಸ್ಪಷ್ಟವಾಗಿ ವಾಸ್ತುವನ್ನು ಸಾಕ್ಷಾತ್ಕರಿಸಿಕೊಂಡ ವಸಿಷ್ಟರು ಹೇಳುವಂತೆ ಮನೆಯಲ್ಲಿ ವಾಸ್ತುದೇವ ನೆಲೆಸಬೇಕು, ಅವನಿಂದ ನಮಗೆ ಏನೆಲ್ಲಾ ಆಗಬೇಕು ಎಂದು ಆಶಿಸಿದ್ದಾನೆ. ಆದರೆ ದಿಕ್ಕು ? ಅದರ ಕುರಿತು ಉಲ್ಲೇಖಿಸಲೇ ಇಲ್ಲ. ದಿಕ್ಕು ಪ್ರತಿದಿನವೂ ಬದಲಾಗುತ್ತದೆ ಸೂರ್ಯೋದಯದ ದಿಕ್ಕನ್ನು ಪೂರ್ವ ಎಂದು ಇಟ್ಟುಕೊಂಡು ಪಶ್ಚಿಮವನ್ನು ನಿರ್ದೇಶಿಸಿದರೆ ಉತ್ತರಾಯಣ ಮತ್ತು ದಕ್ಷಿಣಾಯನಗಳಲ್ಲಿ ನೇರಕ್ಕೆ ಎಂದಿಗೂ ಸಿಗಲಿಕ್ಕಿಲ್ಲವೇನೋ, ಹಾಗಾಗಿಯೇ ವಾಸ್ತು ದೇವನ ಕುರಿತು ಸ್ತುತಿಸಲಾಗಿದೆಯೇ ವಿನಃ ವೇದದಲ್ಲಿ ವಸ್ತುವಿನ ಅಸಂಬದ್ಧತೆ ಕಾಣಿಸುತ್ತಿಲ್ಲ. ಹಾಗಾದರೆ ಇಂದಿನ ವಾಸ್ತು ? ಇಂದಿನ ವಾಸ್ತುಗಳು ವಿಪರೀತ, ಅವೈದಿಕ. ಹಾಗೊಂದು ವೇಳೆ ವಸ್ತುವನ್ನು ನಿರ್ಧರಿಸಲು ಜ್ಯೋತಿಷ್ಯ ಶಾಸ್ತ್ರಕ್ಕೆ ಸಾಧ್ಯವೇ ಹೊರತು ಟಿವಿಗಳಲ್ಲಿ ಕುಳಿತು ಆ ವಾಸ್ತು ಈ ವಾಸ್ತು ಎನ್ನುವುದೆಲ್ಲಾ ಬೊಗಳೆ ಅನ್ನಿಸುತ್ತದೆ. ವೇದದಲ್ಲಿನ ನಿರ್ದೇಶನ. ವಾಸ್ತು ಎನ್ನುವುದು ನಮಗೆ ವಾಸಿಸಲು ಅನುಕೂಲಕರ ವಾತಾವರಣವಿರುವುದೇ ವಾಸ್ತು ಅನ್ನಿಸಿಬಿಡುತ್ತದೆ. ಹೌದು ನಮಗೆ ಬೇಕಾಗಿರುವುದು ಅದೇ ಅಲ್ಲವೇ. ವಾಸ್ತು ಇಂದು ಅಸಹ್ಯ ಹುಟ್ಟಿಸುವಷ್ಟು ಮೂಢವಾಗಿ ಬೆಳೆದಿದೆ. ವಾಸ್ತುವಿನ ಮೊದಲ ಆವಿಷ್ಕಾರ ಆಗಿದ್ದೇ ವಸಿಷ್ಠನಿಂದ.

ಒಂದಂತೂ ಸತ್ಯ. ವಾಸ್ತು ಕೇವಲ ಭೂಮಿಗೆ ಅನ್ವಯಿಸುತ್ತದೆ ವಿನಃ ಅದು ಮೊದಲ ಮಹಡಿಯ ಮನೆಗೋ ಅಥವಾ ಹತ್ತನೇ ಮಹಡಿಯ ಮನೆಗಲ್ಲ. ವಾಸ್ತು ಏನೇ ಇದ್ದರೂ ನೆಲದಲ್ಲಿರುವ ಮನೆಗೆ ಅನ್ವಯಿಸಬಹುದು ಮತ್ತು ಅದರ ಕುರಿತಾದ ಅನವಶ್ಯಕ ಭಯ ಕೂಡದು. ಹಾಗಾಗಿ ಮನೆಯ ವಾಸ್ತು ನಮ್ಮ ಅನುಕೂಲವೇ ಮಾತ್ರ ಅದಕ್ಕಾಗಿ ಹೆದರುವ ಅವಶ್ಯಕತೆ ಇಲ್ಲ.

- ರಾಮಸ್ವಾಮಿ ಕೆ (ಸಂಗ್ರಹ)



## ವ್ಯಕ್ತಿ ಪರಿಚಯ :

# ಶ್ರೀಮತಿ ರೂಪ ಗುರುರಾಜ್

ಮೂಲತಃ ಬೆಂಗಳೂರಿನವರಾದ ಶ್ರೀಮತಿ. ರೂಪ ಗುರುರಾಜ್, ನಮ್ಮ ಸಂಘದ ಹಿರಿಯ ಸದಸ್ಯರಾಗಿರುವಂತಹ ಶ್ರೀ ಗುರುರಾಜ್ ಹಾಗು ಗಿರಿಜಾ ಅವರ ಪುತ್ರಿ. ರೇಡಿಯೋ ಉದ್ಘೋಷಕಿಯಾಗಿ, ದೂರದರ್ಶನಗಳಲ್ಲಿ ನಿರೂಪಕಿ ಹಾಗೂ ವಾರ್ತಾ ವಾಚಕಿಯಾಗಿ, ಸೃಜನಾತ್ಮಕ ಬರಹಗಾರರಾಗಿ, ರೂಪದರ್ಶಿ, ನಟನೆ, ಸಮಾಜ ಸೇವೆ ಹೀಗೆ ಹಲವು ರಂಗಗಳಲ್ಲಿನ ಬಹುಶ್ರುತರು.

ಬೆಂಗಳೂರು ದೂರದರ್ಶನದ ಚಂದನ ವಾಹಿನಿ ಆಕಾಶವಾಣಿ ನಿಲಯ, ಎಫ್.ಎಂ ರೈನ್ ಬೋ ಕಂಪನಾಂಕ, ಅಂತಾರಾಷ್ಟ್ರೀಯ ಡಿಜಿಟಲ್ ರೇಡಿಯೋ ನಮ್ ರೇಡಿಯೋ ಕಾರ್ಯಕ್ರಮಗಳಲ್ಲಿ ರೂಪ ಗುರುರಾಜ್ ಅವರ ಧ್ವನಿ ಚಿರ ಪರಿಚಿತ.

ಕತಾರ್‌ದಲ್ಲಿಜರುಗಿದ ಕನ್ನಡ ರಾಜ್ಯೋತ್ಸವ. 2018 ರ ಅಮೇರಿಕಾದ ಡೆಲ್ಲಾಸ್‌ದಲ್ಲಿ ಜರುಗಿದ ಅಕ್ಕ ಸಮ್ಮೇಳನ, ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಕೂಟ ಸಮ್ಮೇಳನ, ಕೊಯಮತ್ತೂರಿನ ಇಶಾ ಫೌಂಡೇಷನ್ ಉತ್ಸವ, ಉಡುಪಿ ಪರ್ಯಾಯ ಉತ್ಸವ ಸೇರಿದಂತೆ ದೇಶ – ವಿದೇಶಗಳಲ್ಲಿ ಜರುಗಿದ ಸುಮಾರು 800 ಕ್ಕೂ ಅಧಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆ ಕೈಗೊಂಡು, ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕಳೆದ ಒಂದೂವರೆ ದಶಕಕ್ಕೂ ಅಧಿಕ ಕಾಲ ನಿರೂಪಣಾ ಕ್ಷೇತ್ರದಲ್ಲಿರುವ ರೂಪ ಗುರುರಾಜ್ ಕಿರುತೆರೆ, ಹಲವು ಸಿನೆಮಾಗಳಲ್ಲಿ ಅಭಿನಯಿಸಿರುವುದಲ್ಲದೇ, ರೂಪದರ್ಶಿಯಾಗಿ ಉಡುಪು ಹಾಗೂ ಬೆಳ್ಳಿ ಆಭರಣ ಸಂಸ್ಥೆಗಳ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದಾರೆ.

ಪ್ರಸ್ತುತ ವಿಶ್ವವಾಣಿ ದೈನಿಕದಲ್ಲಿ ಅಂಕಣಗಾರ್ತಿಯಾಗಿ ಒಂದೊಳ್ಳೆ ಮಾತು ಅಂಕಣವನ್ನು ಕಳೆದ 3 ವರ್ಷಗಳಿಂದ ಪ್ರತಿದಿನ ಬರೆಯುತ್ತಿದ್ದಾರೆ. ಅದಲ್ಲದೇ ಕನ್ನಡದ ಅನುಭವ ಮಂಟಪ ಎಂದೇ ಖ್ಯಾತಿ ಪಡೆದ ವಿಶ್ವವಾಣಿ ಕ್ಲಬ್ ಹೌಸ್‌ನ ಸಹ ನಿರೂಪಕಿಯಾಗಿ ಸತತ ಮೂರು ವರ್ಷಗಳಿಂದ (800 ಕಂತುಗಳ) ಪ್ರತಿದಿನ ನಡೆಸಿಕೊಂಡು ಬರುತ್ತಿದ್ದಾರೆ. ಹಾಗೂ ಲೇಖಕಿಯಾಗಿ ಕವನ ಸಂಕಲನಗಳ ರೂಪಾಂತರ ಹಾಗೂ ಎರಡು ಸಂಚಿಕೆಗಳ ಒಂದೊಳ್ಳೆ ಮಾತು ಕೃತಿಗಳನ್ನು ಬರೆದಿದ್ದಾರೆ. ಸಮಾಜ ಸೇವೆಯಲ್ಲಿಯೂ ತಮ್ಮನ್ನು ಗುರುತಿಸಿಕೊಂಡ ರೂಪ ಗುರುರಾಜ್, ಮನಃಪ್ರಸಾದ ಎಂಬ ಸರ್ಕಾರೇತರ ಸಂಸ್ಥೆಯಲ್ಲಿ ಸಮಾಜಸೇವೆ ಕೈಗೊಳ್ಳುತ್ತಿದ್ದಾರೆ.

ಪತಿ ಶ್ರೀ ನಾಗರಾಜ್, ಮಗ ಅಶ್ವಿನ್ ಕಶ್ಯಪ್, ಮಗಳು ಅದಿತಿ ಕಶ್ಯಪ್ ಅವರೊಂದಿಗಿನ ಚಿಕ್ಕ ಚೊಕ್ಕ ಕುಟುಂಬ ಶ್ರೀಮತಿ ರೂಪಾ ಗುರು ರಾಜ್ ಅವರದ್ದು.


RELAX CAFE RCB BENGALURU

Visit @ HSR Layout

Opened on 01-01-2023

No. 2331
17th Cross,
Sector - 1
HSR Layout

COFFEE SHOP with
Veg, Continental, South & North Indian Cuisine
along with Kids Amunsement &
space for Birthday Party's.

# ವೃದ್ಧಾಪ್ಯ ಮತ್ತು ಮಾನಸಿಕ ಆರೋಗ್ಯ



ಹುಟ್ಟು ಸಾವುಗಳ ನಡುವೆ ಬೇಡವೆಂದರೂ ಬರಲೇಬೇಕಾದ ಅವಸ್ಥೆ ವೃದ್ಧಾಪ್ಯ ಅಥವಾ ಮುಪ್ಪು. ಮುಪ್ಪು ಎಂದೊಡನೆ ನೆನಪಾ ಗುವುದು ಅಜ್ಜ, ಅಜ್ಜಿ. ಬಿಳಿ ಕೂದಲು, ಬೊಕ್ಕ ತಲೆ, ಕನ್ನಡಕ, ಬಾಗಿದ ಬೆನ್ನು, ಮಂಜಾದ ಕಣ್ಣು, ಮಂದವಾದ ಕಿವಿ, ಚರ್ಮ ಸುಕ್ಕುಗಟ್ಟುವುದು, ಮಾಂಸಖಂಡಗಳು ನಶಿಸಲಾರಂಭಿಸುವುದು, ಹಲ್ಲುಗಳು ಬಿದ್ದು ಹೋಗುವುದು, ವಾಸಿಯಾಗದ ರೋಗ, ಸವೆದುಹೋದ ದೇಹ, ಕಂಡವರ ಕರುಣೆಗೆ ಅಥವಾ ತಮ್ಮವರಿಗೆ ಹೊರೆಯಾಗಿ ಬದುಕುವ ವ್ಯಕ್ತಿ ಚಿತ್ರಣ.

ಸುಮಾರಾಗಿ ಮನುಷ್ಯ 60 ವರ್ಷ ದಾಟಿದನೆಂದರೆ ಮುದುಕ ಎಂದು ಪರಿಗಣಿಸಲಾಗುತ್ತದೆ. ವೃದ್ಧಾಪ್ಯವನ್ನು ಹೊಂದಿದವರಿಗೆ ಉದ್ಯೋಗವನ್ನು ಕೊಡುವುದಕ್ಕೂ ಹಿಂಜರಿಯುತ್ತಾರೆ. ಶರೀರದ ಪ್ರತಿಯೊಂದು ಅಂಗಾಂಗದ ಜೀವಕೋಶಗಳಲ್ಲಿ ಬದಲಾವಣೆಗಳು ಉಂಟಾಗುವುದರಿಂದ, ದೇಹದಲ್ಲಿ ಪ್ರೋಟೀನ್ ಉತ್ಪಾದನೆ ಕಡಿಮೆ ಯಾಗಿ ಹೊಸ ಜೀವಕೋಶಗಳ ಉತ್ಪಾದನೆ ಸರಿಯಾಗಿ ಆಗದೆ, ಪ್ರತಿ ಅಂಗಾಂಗದ ಕಾರ್ಯ ಸಾಮರ್ಥ್ಯ ಕುಂದತೊಡಗುತ್ತದೆ. ಮೆದುಳಿಗೆ ಹರಿಯುವ ರಕ್ತದ ಪ್ರಮಾಣ ಕಡಿಮೆಯಾಗಿ, ಆಮ್ಲಜನಕದ ವೇಗ ತಗ್ಗುತ್ತದೆ, ಮೆದುಳಿನ ನರಕೋಶಗಳ ಸಂಖ್ಯೆ ಇಳಿಕೆಯಾಗಿ, ರಕ್ತದ ಒತ್ತಡ ಹೆಚ್ಚುತ್ತದೆ. ಹೃದಯದಲ್ಲಿ ಬೇಗನೆ ದಣಿವುಂಟಾ ಗುತ್ತದೆ. ಇಡೀ ದೇಹದ ಕಾರ್ಯಕ್ಷಮತೆ ಕ್ಷೀಣವಾಗಿ ವ್ಯಕ್ತಿ ದುರ್ಬಲ ನಾಗುತ್ತಾನೆ.

ಇದಿಷ್ಟು ದೈಹಿಕ ಅಸಮತೋಲನವಾದರೆ ಮಾನಸಿಕವಾಗಿಯೂ ಬಹಳಷ್ಟು ವ್ಯತ್ಯಯಗಳು ಉಂಟಾಗುತ್ತವೆ.

ಸುಮಾರಾಗಿ ವ್ಯಕ್ತಿ 50 ವರ್ಷಕ್ಕೂ ಮೊದಲೇ ಮುಪ್ಪಿನ ಬಗ್ಗೆ ಚಿಂತಿಸಲು ಆರಂಭಿಸುತ್ತಾನೆ. ಅದರಿಂದ ಉಂಟಾಗುವ ಸಮಸ್ಯೆಗಳನ್ನು ಕಲ್ಪಿಸಿಕೊಂಡು ಅಧೀರನಾಗುತ್ತಾನೆ. ಈ ರೀತಿಯ ಅತಿಯಾದ ಕ್ಲೇಶ ಮುಪ್ಪಿನ ತೀವ್ರತೆಯನ್ನು ಹೆಚ್ಚಿಸುತ್ತದೆ. ಮೇಲೆ ತಿಳಿಸಿದಂತೆ ಭೌತಿಕವಾಗಿ ಅವನತಿ ಉಂಟಾಗುವುದರಿಂದ ಆಲೋಚನಾ ಶಕ್ತಿ, ನಿರ್ಧಾರ ತೆಗೆದು ಕೊಳ್ಳುವ ಶಕ್ತಿ, ಲೆಕ್ಕಾಚಾರ ಮಾಡುವ ಸಾಮರ್ಥ್ಯ, ನೆನಪಿನ ಶಕ್ತಿ ಎಲ್ಲವೂ ಕಡಿಮೆಯಾಗುತ್ತಾ ಹೋಗುತ್ತದೆ. ಹಾಗಾಗಿ ಸ್ವಾಭಾವಿಕ ವಾಗಿಯೇ ವೃದ್ಧರು ಯಾವುದೇ ವಿಚಾರವಾದರೂ ಹೊಸದಾಗಿ ಅಭ್ಯಸಿಸಲು ಅಥವಾ ಒಪ್ಪಿಕೊಳ್ಳಲು ಅಷ್ಟು ಸುಲಭವಾಗಿ ಸಾಧ್ಯವಾಗದೆ, ಬದಲಾ ವಣೆಯನ್ನು ಇಷ್ಟಪಡುವುದಿಲ್ಲ.

ವೃದ್ಧಾಪ್ಯಕ್ಕೆ ಬಂದಂತೆಲ್ಲ ಹೆಚ್ಚು ಹೆಚ್ಚು ಮಾನಸಿಕ ಕ್ಲೇಶಕ್ಕೆ ಒಳಗಾಗುತ್ತಾರೆ. ಇದರಿಂದ ಕಾರಣವಿಲ್ಲದೆ ಗಾಬರಿ, ದುಃಖ ಅಥವಾ ಕೋಪವನ್ನು ಕೂಡ ಪ್ರದರ್ಶಿಸುತ್ತಾರೆ. ವೃದ್ಧಾಪ್ಯದಲ್ಲಿ ಬರುವಂತಹ ರೋಗರುಜಿನೆಗಳು, ನಿಷ್ಕ್ರಿಯತೆ, ಪರಾವಲಂಬಿತನದಿಂದಾಗಿ ಅತಿ ಯಾದ ಭಾವೋದ್ವೇಗ ಸಹಜವೇ. ಒಟ್ಟಿನಲ್ಲಿ ವ್ಯಕ್ತಿಯ ವಂಶವಾಹಿನಿ ವಾತಾವರಣ ಹಾಗೂ ಬದುಕುವ ಶೈಲಿ ಮುಪ್ಪನ್ನು ನಿರ್ಧರಿಸುತ್ತದೆ. ಹೀಗೆ ಬರುವಂತಹ ಮುಪ್ಪನ್ನು ಹೇಗೆ ಹೊಂದಿಕೊಳ್ಳಬೇಕು ಎನ್ನುವುದು ವ್ಯಕ್ತಿಯ ಜಾಣತನ ನಿರ್ಧರಿಸುತ್ತದೆ.

ಮೊದಲನೆಯದಾಗಿ ವ್ಯಕ್ತಿಯು ತನ್ನ ದೃಷ್ಟಿಕೋನವನ್ನು ಬದಲಿಸಿ ಕೊಳ್ಳಬೇಕಾಗುತ್ತದೆ. ಮುಪ್ಪು ಜೀವನದಲ್ಲಿ ಒಂದು ಅನಿವಾರ್ಯ ಹಂತ, ಅದಕ್ಕೆ ಹೆದರಬಾರದು. ತನ್ನ ಅನುಭವದ ಹಿನ್ನೆಲೆಯಲ್ಲಿ ಮುಂದೆ ಬರಬಹುದಾದ ಸವಾಲು ಸಮಸ್ಯೆಗಳನ್ನು ನಿರೀಕ್ಷಿಸಿ ಅವುಗಳನ್ನು ನಿವಾರಿಸಲು ಏನು ಕ್ರಮ ಬೇಕು ಎಂಬುದನ್ನು ಆಲೋ ಚಿಸಿ ಕೈಗೊಂಡಾಗ ಮುಪ್ಪಿನ ಬಗ್ಗೆ ಇರುವಂತಹ ಭಯ ಮತ್ತು ಆತಂಕ ಕಡಿಮೆಯಾಗುತ್ತದೆ.

ವಯಸ್ಸಿನ ಜೊತೆಯಲ್ಲಿಯೇ ಬಂದಿರುವಂತಹ ಅನುಭವಗಳು, ಕೌಶಲ್ಯಗಳು ಮತ್ತು ಬುದ್ಧಿವಂತಿಕೆಯಿಂದ ಸಮಾಜದಲ್ಲಿ ನಾವು ಕೂಡ ಇತರರಿಗೆ ಸ್ಪರ್ಧೆಯನ್ನು ನೀಡಬಲ್ಲೆವು ಎಂಬಂತಹ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು.

Nagaraj
M: 9845191648

Pratap
M : 9742142281

STANDARD PRINTERS

*Multi Colour Offset Prints*

No. 22, 6th Cross, Rangappa Road, Kamakya Layout,
BSK 3rd Stage, 5th Block, Bangalore - 560 085

ವೃದ್ದರು ಕುಟುಂಬದೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಂಡಾಗ, ಕುಟುಂಬದವರು ವಾಸ್ತವಿಕ ದೃಷ್ಟಿಯಿಂದ ಆತನನ್ನು ಕಂಡಾಗ, ಆದಷ್ಟು ಸ್ವಾವಲಂಬಿಯಾಗಿ ಬಾಳಲು ಅವಕಾಶ ಮಾಡಿಕೊಟ್ಟಾಗ, ಆತನಿಗೆ ಸ್ಥಾನಮಾನವನ್ನು ಕೊಟ್ಟಾಗ ತನ್ನ ಸಾಮರ್ಥ್ಯದ ಬಗ್ಗೆ ಪೂರ್ಣ ವಿಶ್ವಾಸವನ್ನು ಹೊಂದಿ ಇತರರಿಗೆ ಹೊರೆಯಾಗದೆ ಬದುಕುವುದು ಅವರಿಗೆ ಸುಲಭವಾಗುತ್ತದೆ.

ಸಮಾಜದ ದೃಷ್ಟಿಕೋನದಲ್ಲಿ ನೋಡಿದಾಗ, ಸಮಾಜದಲ್ಲಿ ಸ್ಥಾನಮಾನ, ಮರ್ಯಾದೆ, ಸಹಾಯ ಮತ್ತು ಸೌಲಭ್ಯಗಳು ದೊರೆತಾಗ ವ್ಯಕ್ತಿಯು ತನ್ನ ನ್ಯೂನ್ಯತೆಗಳನ್ನು ಮರೆತು ಸಂತಸದಿಂದ ಇತರರೊಂದಿಗೆ ಬೆರೆತು ವೃದ್ಧಾಪ್ಯದಲ್ಲಿಯೂ ತನ್ನ ಅನುಭವವನ್ನು ಸಮಾಜದ ಒಳಿತಿಗಾಗಿ ಉಪಯೋಗಿಸಿಕೊಳ್ಳಲು ಶಕ್ಯನಾಗುತ್ತಾನೆ. ಸಮಾಜದಲ್ಲಿ ಕಾಲಕಾಲಕ್ಕೆ ಬದಲಾಗುವಂತಹ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು.

ವೃದ್ದರು ಸಾಮಾನ್ಯವಾಗಿ ಎದುರಿಸಬೇಕಾಗಿರುವ ಸಮಸ್ಯೆಗಳು ಎಂದರೆ, ನಿರುದ್ಯೋಗ ಮತ್ತು ಹಣಕಾಸಿನ ತೊಂದರೆಗಳು. ಆರ್ಥಿಕ ಪರಾವಲಂಬನೆ ವ್ಯಕ್ತಿಗೆ ಬಹಳ ನೋವುಂಟುಮಾಡುತ್ತದೆ. ಮನೆಯ ಯಜಮಾನನಾಗಿ ಮೆರೆದವನಿಗೆ ಬಿಡಿ ಕಾಸಿಗೂ ತನ್ನ ಕುಟುಂಬದ ಸದಸ್ಯರನ್ನು ಕೇಳುವುದು ಕಷ್ಟವೇ!

ಎರಡನೆಯ ಪ್ರಮುಖ ಸಮಸ್ಯೆ ಎಂದರೆ ಒಂಟಿತನ. ದೈಹಿಕ ಮತ್ತು ಮಾನಸಿಕ ಬದಲಾವಣೆಗಳಿಂದ ಇತರರೊಡನೆ ಬೆರೆಯುವುದು ಸಮಸ್ಯೆ ಎಂದೆನಿಸಬಾರದು.

ಮೂರನೆಯದಾಗಿ ವೃದ್ಧಾಪ್ಯಕ್ಕೂ ಮೊದಲೇ ಗಳಿಸಿರುವ ಸ್ಥಾನಮಾನಗಳ ಬದಲಾವಣೆ, ಸಮಾಜಕ್ಕೆ ಅವರಿಂದ ಸಿಗುವಂತಹ ಉಪಯುಕ್ತತೆ ಕಡಿಮೆಯಾಗಿ, ಗೌರವ ಆದರಗಳು ಕಡಿಮೆಯಾಗಿ, ಒಡನಾಡಿಗಳು ಕೂಡ ಕಡಿಮೆಯಾಗಿ ಬದುಕಿನಲ್ಲಿ ಕೊರತೆಯನ್ನು ಕಾಣುತ್ತಾರೆ

ಅವೆಲ್ಲವನ್ನೂ ಎದುರಿಸಲು ಬೇಕಾದಂತಹ ಮುಂಜಾಗ್ರತೆಯನ್ನು ವಹಿಸಿದರೆ ಅಥವಾ ಪೂರ್ವಸಿದ್ಧತೆ ನಡೆಸಿದರೆ ವೃದ್ಧಾಪ್ಯವು ಶಾಪವಾಗುವುದಿಲ್ಲ. ಯೌವನದಲ್ಲಿ ನಾವು ಸಂತೋಷ ಪಟ್ಟಂತೆ ಮುಪ್ಪಿನಲ್ಲಿಯೂ ಸಂತೋಷ ಮತ್ತು ಸಮಾಧಾನವನ್ನು ಹೊಂದಬಹುದು.

1. ಶಿಸ್ತು ಬದ್ಧ ಜೀವನವನ್ನು ನಡೆಸುವುದು
2. ಪೌಷ್ಟಿಕ ಸಮತೋಲನ ಆಹಾರವನ್ನು ಸೇವಿಸುವುದು
3. ರಕ್ತ ಒತ್ತಡ ಸಕ್ಕರೆ ಕಾಯಿಲೆ ಇದ್ದರೆ ಕಟ್ಟುನಿಟ್ಟಾದ ಚಿಕಿತ್ಸೆಯನ್ನು ಪಡೆಯುವುದು
4. ಯಾವುದೇ ಕಾಯಿಲೆಗಳು ಬಂದಾಗ ತಡ ಮಾಡದೆ ವೈದ್ಯಕೀಯ ನೆರವನ್ನು ಪಡೆಯುವುದು
5. ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಉಪಯುಕ್ತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು
6. ಕುಟುಂಬದ ಸದಸ್ಯರೊಂದಿಗೆ ಮಾತುಕತೆ, ಮಕ್ಕಳೊಂದಿಗೆ ಒಡನಾಟ ಮತ್ತು ಪರಸ್ಪರ ಸಹಯೋಗವನ್ನು ಬಲಪಡಿಸುವುದು.
7. ಮನಶಾಂತಿಗಾಗಿ ಪೂಜೆ-ಪುನಸ್ಕಾರ, ಅಧ್ಯಯನ ಇತ್ಯಾದಿ ಉನ್ನತ ಮೌಲ್ಯಗಳನ್ನು ರೂಡಿಸಿಕೊಳ್ಳುವುದು.
8. ಇತರರಿಂದ ನೆರವು, ಪ್ರೀತಿ-ವಿಶ್ವಾಸ, ಮನರಂಜನೆ, ಆರೋಗ್ಯ ಸೌಲಭ್ಯಗಳು ವ್ಯವಸ್ಥಿತವಾಗಿ ಲಭಿಸಿದಾಗ ಮುಪ್ಪು ಮುಪ್ಪು ಎನಿಸುವುದೇ ಇಲ್ಲ!.

ನಮ್ಮ ಋಷಿ-ಮುನಿಗಳು ವೃದ್ಧಾಪ್ಯವನ್ನು ಎದುರಿಸು ಕಾಯಕಲ್ಪ ಎಂಬ ಚಿಂತನೆಯನ್ನು ನಮ್ಮ ಪುರಾಣಗಳಲ್ಲಿ ಸಾಕಾರಗೊಳಿಸಿರುವುದು ಯಯಾತಿ ಎಂಬ ಯತಿಯಲ್ಲಿ ಮಾತ್ರ ಕಂಡುಬರುತ್ತದೆ. ಆತ ಕಾಯಕಲ್ಪದಿಂದ ಮುಪ್ಪಿನಿಂದ ಯೌವನವನ್ನು ಹೊಂದಿರುತ್ತಾನೆ.

ವಿಜ್ಞಾನಿಗಳು ಇಂದಿಗೂ ಮುಪ್ಪನ್ನು ಗೆಲ್ಲಲು ಹರಸಾಹಸ ಪಡುತ್ತಲೇ ಇದ್ದಾರೆ. ಶೋಧನೆಗಳು ನಡೆಯುತ್ತಲೇ ಇದೆ. ಯೌವ್ವನ ಭರಿತರಾಗಿರಲು ಆಶಿಸುತ್ತಿದ್ದಾರೆ. ಆ ಪ್ರಯತ್ನ ಒಂದಲ್ಲ ಒಂದು ದಿನ ಯಶಸ್ಸು ಗಳಿಸಬಹುದು. ಅದಕ್ಕಾಗಿ ನಾವು ಕಾಯುವಂತಿಲ್ಲ. ಅನಿವಾರ್ಯವಾದ ಮುಪ್ಪನ್ನು ಒಪ್ಪುವುದು, ಒಪ್ಪಿಕೊಂಡು ಸಮಾಧಾನದಿಂದ ಬದುಕುವುದು, ನಿಮ್ಮ ಕೈಯಲ್ಲಿದೆ. ಮತ್ತು ನಿಮ್ಮ ಕುಟುಂಬದ ಮೇಲಿದೆ, ನಿಮ್ಮ ಸಮಾಜದ ಮೇಲಿದೆ. ವೃದ್ಧರನ್ನು ಸಂತೋಷದಿಂದ ಬದುಕುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಬೇಕಾಗಿದೆ.

(ಆಧಾರ:
Dr CR ಚಂದ್ರಶೇಖರ್ ಅವರ ವೃದ್ಧಾಪ್ಯದಲ್ಲಿ ಮಾನಸಿಕ ಆರೋಗ್ಯ)

SME | S.M.ENTERPRISES

WE MANUFACTURE & REPAIR ENERGY EFFICIENT STAR RATED TRANSFORMERS

DISTRIBUTION TRANSFORMERS
❖ Range : 15KVA – 1000KVA
❖ Services : Manufacturing, repair & reconditioning
❖ Type : Dry type & conventional type

ADDRESS
C-28 KSSIDC, Industrial Estate, 1st Stage, Mandya - 571402.
Branches : Mathikere (Bengaluru), Gubbi, Chitradurga
Mobile: +91 9845203607
Email: sme_mathikere@yahoo.com



ಮಾನ್ಯ ಸದಸ್ಯರೇ,

ನಮ್ಮ ಸಂಘದ ಹಿರಿಯ ಸದಸ್ಯರು, ಆತ್ಮೀಯರೂ ಮತ್ತು ಮಾನ್ಯರೂ ಆದ ಡಾ.ಗೋಕುಲನಾಥ್ ಅವರು 28/03/24 ಬೆಳಿಗ್ಗೆ ಸುಮಾರು 11.30ರ ಸಮಯಕ್ಕೆ ದೈವಾಧೀನರಾದ ರೆಂದು ತಿಳಿಸಲು ವಿಷಾದವೆನಿಸುತ್ತದೆ.

ಪ್ರಸಿದ್ಧ ಶಿಕ್ಷಣ ಸಂಸ್ಥೆಯಾದ ಆಚಾರ್ಯ ಪಾಠಶಾಲಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತರಾಗಿ ಹೆಚ್.ಎಸ್.ಆರ್. ಲೇಔಟ್‌ನ ಶಕುಂತಲಾದೇವಿ ಕಾಲೇಜಿನಲ್ಲಿ ನಿರ್ದೇಶಕ ರಾಗಿ ಹಾಗೂ ಸೆಕ್ಟರ್ 1ರ ಶ್ರೀ ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನ ದಲ್ಲಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶ್ರೀಯುತರು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪೂರ್ಣ ಮಟ್ಟದ ಸಹಕಾರವನ್ನು ಕೊಡುತ್ತಿದ್ದರು.

ಇವರ ಆತ್ಮಕ್ಕೆ ದೇವರು ಸದ್ಗತಿ ನೀಡಲೆಂದು ಮತ್ತು ಕುಟುಂಬದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಕರುಣಿಸಲಿ ಎಂದು ಸಂಘದ ಪರವಾಗಿ ಪ್ರಾರ್ಥಿಸುತ್ತೇವೆ.

*- ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣರ ಸಂಘ*

ಮಾನ್ಯ ಸದಸ್ಯರೇ,

ಬೆಂಗಳೂರಿನಲ್ಲಿ ರಾಜ್ಯಮಟ್ಟದ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳದ ಸ್ಥಳ, ಉದ್ಯೋಗ ಮೇಳದ ದಿನಾಂಕ, ರಿಜಿಸ್ಟ್ರೇಷನ್ ಮಾಡಿಸುವುದು ಹೇಗೆ ಇತ್ಯಾದಿ ಮಹತ್ವದ ಸೂಚನೆಗಳನ್ನು ವಾಟ್ಸಾಪ್ ಮುಖಾಂತರ ತಿಳಿಸಲಾಗು ವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.

- ಕಾರ್ಯದರ್ಶಿ
ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣರ ಸಂಘ




**SRI DENTAL CLINIC**

Prof.Dr. B.S Srikanth Choudhary,M.D.S
Cosmetic Dentist & Endodontist

Dr. B. Prathyusha,B.D.S
Dental Surgeon

Consulting Hours:
Mon to Sat: 10 AM to 1 PM and 5 PM to 9 PM
Sunday: 10 AM to 1 PM

Phone- 9845515878
Email-drbssrikanth@gmail.com

Address:
No. 152, 24th Main,( Next to Thirumala Theatre, HSR Layout,Sector 1, Agara, Bangalore- 560012

# Radiant Systems

RADIANT SYSTEMS

YASKAWA

**QUALITY PRODUCTS, TIMELY SERVICE**

RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.

1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.




**#695, 15th Cross, JP Nagar, 2nd Phase, Bangalore-560078**

**Mobile: +91 7760277175 Email: radiantspl@gmail.com**

# QUALITY INDUSTRIES

Specializing in the manufacturing of DPC aluminum wires and strips, our state-of-the-art facilities ensure precision and adherence to the highest industry standards. Beyond manufacturing excellence, we excel in the repair and reconditioning of distribution transformers, ranging from 15 KVA to 1000 KVA capacities

# D60/69 KSSIDC Industrial Estate Veerasandra Bengaluru - 560100

+91-9845203607

support@qualityindustries.co.in

GSTIN: 29ATHN5023A1ZZ

PH: 080-41236002

MOB +91 8884695667



NAVEEN

# ನ್ಯೂ ಮಂಗಳೂರು ಸ್ಟೋರ್ಸ್

# NEW MANGALORE STORES

*Dealers In: All Kinds Of Mangalore Condiments, Vegetable, House Hold Items Sweets & Much More From South Canara*



**Mixture & Muruku Items**

Mixture, Banana Chips, Chakli, Nippattu,
Kodubale & All Chips Items

**Papad Items**

Papads, Sandige, Masala Menasu,
Jackfruit Papad, Raagi Papad

**All Masala Items**

Sambar Powder, Rasam Powder, Chatni Powder,
Vangi Bath Powder, Puliogare Gojju & Powder

**Fresh Items**

Pathrode, Shavige, Kotte Kadubu, Buns, Goli Baje,
Neer Dosa, Akki Rotti,Jolada Rotti,

**Mangalore Vegetables**

Basale,Harive, Bende Kaay, Udupi Gulla &
All Mangalore Vegetables

**Ayurvedic Items**

Brahmi Powder, Amrutha Balli Powder,
Pain Relief Oil, Dashamoolarishta

**We Undertake All Party, Events & Festival Bulk Orders**

080-41236002 8884695667/ 9449900519

#1710, 19th Main Road, HSR Layout 2nd Sector, Near Sai Baba Temple Road, Bangalore-560 102


MAGNA®
Centres for Obesity Diabetes and Endocrinology
Thyroid
Obesity
Growth Disorder
Osteoporosis
12th ANNIVERSARY
Diabetes
PCOS
Dietician
Pituitary Disease
Sexual Problems
Contact : 9945953953 / 9739412608
Sai Manasa Building, #703, 1st Floor, 30th Main, BTM 2nd Stage Next to Kuvempu Nagar Bus Depot, Bengaluru - 560076.
Scan the QR Code to visit Our Website